ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ವಿವೇಕಾನಂದ ಇವರು ನಿಯಮ 330ರ ಮೇರೆಗೆ ಪ್ರಸ್ತಾಪಿಸಿರುವ ಸಾರ್ವಜನಿಕ ಮಹತ್ವದ ವಿಷಯಕ್ಕೆ ಸರ್ಕಾರದ ಉತ್ತರ.

ವಿಷಯ:

**ರಾಜ್ಯ ಸರ್ಕಾರಿ ನೌಕರರಿಗೆ ಮುಂಬಡ್ತಿ ಸಲುವಾಗಿ ನಿಗದಿ ಮಾಡಲಾಗಿರುವ ರೋಸ್ಟರ್ ನಿಯಮ 1978ರ ಅನುಸಾರ ಮೀಸಲು ರೋಸ್ಟರ್ ಬಿಂದುಗಳ ಅಧಾರದಲ್ಲಿ ಮುಂಬಡ್ತಿ ನೀಡಲು ಅವಕಾಶವಿದೆಯೇ, ಹೆಚ್ಚುವರಿ ಬಿಂದುವಿನ ಯಾವುದೇ ಪ್ರಮೆಯಗಳೂ ಇಲ್ಲದಿದ್ದಾಗ, ಒಂದು ರೋಸ್ಟರ್ ವರ್ತುಲದಲ್ಲಿ ನಿಗದಿಗೊಂಡ ರೋಸ್ಟರ್ ಬಿಂದು ಮೀರಿ ಹೆಚ್ಚುವರಿ ಬಿಂದುಗಳಲ್ಲಿ ಮುಂಬಡ್ತಿ ನೀಡುವುದು ಜೇಷ್ಠತಾ ನಿಯಮಗಳನ್ನು ಉಲ್ಲಂಘಿಸಿದಂತಾಗುವುದಿಲ್ಲವೇ ಹಾಗೂ ರೋಸ್ಟರ್ ನಿಯಮ 1987ರ ಅನುಸಾರ ಮೀಸಲು ರೋಸ್ಟರ್ ಬಿಂದುಗಳ ಅಧಾರದ ಮೇಲೆ ಮುಂಬಡ್ತಿಸುವುದು ಹಾಗೂ ವೃಂದ ಬಲದಲ್ಲಿ ನಿಗದಿತ ಪ್ರಮಾಣದ ನೌಕರರು ಲಭ್ಯವಿದ್ದಾಗಲೂ ರೋಸ್ಟರ್ ಬಿಂದುವಿನ ಎದುರಾಗಿ ಮುಂಬಡ್ತಿ ನೀಡಬಹುದೇ, ಹಲವು ಇಲಾಖೆಗಳಲ್ಲಿ ವೃಂದಬಲದ ಅನುಪಾತವನ್ನು ಅನುಸರಿಸಿ ಹೆಚ್ಚುವರಿ ಮುಂಬಡ್ತಿ ನೀಡಲಾಗುತ್ತಿರುವ ಬಗ್ಗೆ ಸರ್ಕಾರ ಕ್ರಮಕೈಗೊಳ್ಳುವುದೇ ಎಂಬುದರ ಕುರಿತು ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಸ್ತಾಪಿಸಬಯಸುತ್ತೇನೆ.**

ಸರ್ಕಾರದ ಉತ್ತರ:

ದಿನಾಂಕ: 27.04.1978ರಲ್ಲಿ ನಿಗದಿಪಡಿಸಿರುವ 33 ಬಿಂದುಗಳ ರೋಸ್ಟರ್ ಬಿಂದುಗಳನ್ನು ದಿನಾಂಕ: 30.08.1979ರ ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 22 ಎಸ್ ಬಿಸಿ 79ರಲ್ಲಿ ಮಾರ್ಪಡಿಸಲಾಗಿರುವ 33 ಬಿಂದುಗಳನ್ವಯ ಪರಿಗಣಿಸಿ ಮುಂಬಡ್ತಿ ನೀಡಬಹುದಾಗಿರುತ್ತದೆ. ಸದರಿ ಮೀಸಲಾತಿ ಬಿಂದುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅರ್ಹ ನೌಕರರು ಮುಂಬಡ್ತಿಗೆ ಲಭ್ಯವಿಲ್ಲದಿದ್ದಲ್ಲಿ ಸದರಿ ಬಿಂದುವನ್ನು ಬ್ಯಾಕ್‌ಲಾಗ್ ಎಂದು ಪರಿಗಣಿಸಬೇಕಾಗುತ್ತದೆ. ಮುಂದಿನ ಮುಂಬಡ್ತಿ ಸಮಯದಲ್ಲಿ ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರು ಮುಂಬಡ್ತಿಗೆ ಲಭ್ಯವಿದ್ದಲ್ಲಿ, ಎದುರು ಅರ್ಹ ಪರಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರನ್ನು ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 10 ಸೆಹಿಮ 97ರಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ನಿಗದಿಪಡಿಸಲಾಗಿರುವ ಹೆಚ್ಚುವರಿ ರೋಸ್ಟರ್ ಬಿಂದುಗಳ ಎದುರು ಪರಿಗಣಿಸಿ ಮುಂಬಡ್ತಿ ನೀಡಬಹುದಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 23(i) ಸೇನೆನಿ 2015, ದಿನಾಂಕ: 4.03.2015ರಲ್ಲಿ ದಿನಾಂಕ: 24.06.1997ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 10 ಸೆಹಿಮ 97ರಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ನೌಕರರಿಗೆ ನಿಗದಿಪಡಿಸಲಾಗಿರುವ ಹೆಚ್ಚುವರಿ ರೋಸ್ಟರ್ ಬಿಂದುಗಳನ್ನು ರದ್ದುಗೊಳಿಸಿ, ಪರಿಶಿಷ್ಟ ಜಾತಿ ನೌಕರರಿಗೆ ಬಡ್ತಿಯಲ್ಲಿ ಮೀಸಲಾತಿ ಒದಗಿಸಲು 33 ರೋಸ್ಟರ್ ಬಿಂದುಗಳ ವರ್ತುಲದಲ್ಲಿ ಹಾಲಿ ನಿಗದಿಪಡಿಸಿರುವ 1, 7, 14, 21, 27 ನೇ ಬಿಂದುಗಳ ಜೊತೆಗೆ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುವ ಸಂದರ್ಭದಲ್ಲಿ ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆಗೆ ಸೀಮಿತಗೊಳಿಸಿ, ಅರ್ಹ ನೌಕರರ ಲಭ್ಯತೆಯನ್ನು ಅನುಸರಿಸಿ, ಒಂದು ರೋಸ್ಟರ್ ವರ್ತುಲದಲ್ಲಿ ಗರಿಷ್ಠ 9 ಹೆಚ್ಚುವರಿ ಬಿಂದುಗಳನ್ನು ಹಾಗೂ ಪರಿಶಿಷ್ಠ ಪಂಗಡದ ನೌಕರರಿಗೆ ಬಡ್ತಿಯಲ್ಲಿ ಮೀಸಲಾತಿ ಒದಗಿಸಲು 33 ರೋಸ್ಟರ್ ಬಿಂದುಗಳ ವರ್ತುಲದಲ್ಲಿ ಹಾಲಿ ನಿಗದಿಪಡಿಸಿರುವ 2ನೇ ಬಿಂದುವಿನ ಜೊತೆಗೆ ಬ್ಯಾಕ್ ಲಾಗ್ ಹುದ್ದೆಗಳನ್ನು ತುಂಬುವ ಸಂದರ್ಭದಲ್ಲಿ ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆಗೆ ಸೀಮಿತಿಗೊಳಿಸಿ ಅರ್ಹ ನೌಕರರ ಲಭ್ಯತೆಯನ್ನು ಅನುಸರಿಸಿ ಒಂದು ರೋಸ್ಟರ್ ವರ್ತುಲದಲ್ಲಿ ಗರಿಷ್ಠ 1 ಹೆಚ್ಚುವರಿ ಬಿಂದುವನ್ನು ಪರಿಗಣಿಸಿ ಬಡ್ತಿ ನೀಡುವಂತೆ ಮಾರ್ಪಡಿಸಲಾಗಿದೆ.

ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧಿನಿಯಮ 2022ರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ನೇಮಕಾತಿಯಲ್ಲಿ ನಿಗದಿಪಡಿಸಲಾದ ಹೆಚ್ಚಿನ ಮೀಸಲಾತಿ ಪ್ರಮಾಣಕ್ಕೆ ಅನುಗುಣವಾಗಿ ಮುಂಬಡ್ತಿಯ ಮುಖಾಂತರ ಭರ್ತಿ ಮಾಡಬೇಕಾದ ರಿಕ್ತಸ್ಥಾನಗಳಿಗೆ ಬಿಂದುಗಳನ್ನು ಗುರುತಿಸಿ, ದಿನಾಂಕ: 30.08.1979ರ ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 29 ಎಸ್‌ಬಿಸಿ 77ರಲ್ಲಿ ನಿಗದಿಪಡಿಸಿರುವ 33 ಬಿಂದುಗಳ ರೋಸ್ಟರ್ ಬದಲಾಗಿ 100 ಬಿಂದುಗಳ ರೋಸ್ಟರ್‌ನ್ನು ಅನುಸರಿಸುವಂತೆ ದಿನಾಂಕ: 28.12.2022ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 02 ಸೆಹಿಮ 2022ರಲ್ಲಿ ಮಾರ್ಗಸೂಚನೆಗಳನ್ನು ನೀಡಲಾಗಿರುತ್ತದೆ. ಸದರಿ 100 ಬಿಂದುಗಳಲ್ಲಿ ಪರಿಶಿಷ್ಟ ಜಾತಿಯ ನೌಕರರಿಗೆ ಶೇಕಡ 17 ಮತ್ತು ಪರಿಶಿಷ್ಟ ಪಂಗಡದ ನೌಕರರಿಗೆ ಶೇಕಡ 7 ರಷ್ಟು ಮೀಸಲಾತಿಯನ್ನು ಕಲ್ಪಿಸಲಾಗಿರುತ್ತದೆ.

ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ಮುಂಬಡ್ತಿಯಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಹೆಚ್ಚುವರಿ ಬಿಂದುಗಳನ್ನು ಗುರುತಿಸಿ ದಿನಾಂಕ: 28.11.2023ರಂದು ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 266 ಸೇನೆನಿ 2022ನ್ನು ಹೊರಡಿಸಲಾಗಿರುತ್ತದೆ ಅದರನ್ವಯ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಬಹುದಾಗಿರುತ್ತದೆ.

ಮುಂಬಡ್ತಿ ನೀಡುವ ಸಂದರ್ಭದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರು ಲಭ್ಯವಿಲ್ಲದ ಹಿನ್ನೆಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರಿಗೆ ಮೀಸಲಿರಿಸಿದ ಬಿಂದುವನ್ನು ಇತರೆಯವರಿಂದ ಭರ್ತಿ ಮಾಡಿದ ಸಂದರ್ಭದಲ್ಲಿ ಅವುಗಳನ್ನು ಬ್ಯಾಕ್‌ಲಾಗ್ ಎಂದು ಪರಿಗಣಿಸಿ, ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರು ಲಭ್ಯವಾದಾಗ ಹೆಚ್ಚುವರಿ ಬಿಂದುವಿನ ಎದುರು ಅಂತಹ ಬ್ಯಾಕ್‌ಲಾಗ್ ಹುದ್ದೆಗಳನ್ನು ಮಾತ್ರ ಭರ್ತಿ ಮಾಡಬೇಕಾಗುತ್ತದೆ. ಮುಂದುವರೆದು, ಕಾರ್ಯನಿರತ ವೃಂದಬಲದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರ ಪ್ರಾತಿನಿಧ್ಯತೆ ಇದ್ದಾಗಲೂ ಸಹ ಬ್ಯಾಕ್‌ಲಾಗ್ ಹುದ್ದೆಗಳು ಲಭ್ಯವಿದ್ದಲ್ಲಿ ಸದರಿ ಬ್ಯಾಕ್‌ಲಾಗ್ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಬೇಕಾಗುತ್ತದೆ.

ಸಂಖ್ಯೆ: ಸಿಆಸುಇ 67 ಸೇನೆನಿ 2025

(ಸಿದ್ದರಾಮಯ್ಯ)
**ಮುಖ್ಯಮಂತ್ರಿ**